**ಸಂದರ್ಶನ: ಅಹಲ್ಯಾ ಬಲ್ಲಾಳ್**

ಚಿತ್ರಗಳು: ಡಿ.ಸಿ. ನಾಗೇಶ್, ರೋನ್ಸ್ ಬಂಟ್ವಾಳ್

## ಕಥನಗಾರ ವ್ಯಾಸರಾವ್ ನಿಂಜೂರ್ ಜೊತೆ ಸಾಹಿತ್ಯ ಸಲ್ಲಾಪ

# ಕುಳುವಾರಿಗಳ ರಾಯಭಾರಿ

ಹಾದೋ ಅಲ್ಲವೋ ಎಂಬಂತೆ ಕಣ್ಣುಮುಚ್ಚಾಲೆಯಾಡುವ ಕಿರು ಮಂದಹಾಸ, ಕನ್ನಡಕದ ಹಿಂದೆ ಹೊಳೆಯುವ ತೀಕ್ಷ್ಣ ಕಂಗಳು. ಡಾ. ವ್ಯಾಸರಾವ್ ನಿಂಜೂರ್ ಎಂದಾಕ್ಷಣ ಮೊದಲಿಗೆ ಕಣ್ಮುಂದೆ ಬರುವ ಚಿತ್ರ ಇದು. ನಮ್ಮದೇ ಕೂಡು ಕುಟುಂಬದ ಹಿರಿಯ ಸದಸ್ಯರಾಗಿರಬಹುದು ಎನಿಸುವಷ್ಟು ಸೀದಾ ಸಾದಾ ನಡೆ ನುಡಿ, ಉಡುಗೆ ತೊಡುಗೆಯ ಸೌಜನ್ಯಮೂರ್ತಿ. ಸಾಹಿತ್ಯ ಸಮಾರಂಭಗಳಲ್ಲಿ ಅಥವಾ ಸಾಂಸ್ಕೃತಿಕ ವೇದಿಕೆಗಳ ಮೇಲಿರುವಾಗ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾತು. ಪ್ರಚಾರ, ಪ್ರಶಂಸೆ ಮತ್ತು ಪುರಸ್ಕಾರಕ್ಕೆ ಮಾರು ಹೋಗದ ಸ್ವಭಾವ. ಅವರು ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿ–ಸಂಶೋಧಕ, ಪ್ರಾಧ್ಯಾಪಕ; ವಿಜ್ಞಾನಕ್ಕೆ ನೀಡಿರುವ ಕೊಡುಗೆಯ ಜೊತೆಗೆ ಅವರು ತಮ್ಮ ಕತೆ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಹಿಗ್ಗಿಸಿದ್ದಾರೆ.

‘‘ನಾನು ಬರೆಯುವುದು ಯಾರೂ ನನ್ನನ್ನು ಮಾಜೀ ಲೇಖಕ ಎಂದು ಕರೆಯಬಾರದಲ್ಲ, ಅದಕ್ಕೆ,’’ ಎನ್ನುತ್ತಾರೆ 80 ವರ್ಷದ ನಿಂಜೂರ್ ತಮ್ಮದೇ ಛಾಪಿನ ಹಾಸ್ಯದಲ್ಲಿ! ಅರವತ್ತರ ದಶಕದಿಂದಲೇ ಸೃಜನಶೀಲ ಬರವಣಿಗೆಯ ಆರಂಭ. ‘ಕುಂಕುಮ’, ‘ಮಂಚ’, ‘ದೂಜ ಮಾಸ್ತರರ ಮಗಳು ಬಸಿರಾದುದು’ (ಕಥಾಸಂಕಲನಗಳು), ‘ಉಸಿರು’, ‘ಚಾಮುಂಡೇಶ್ವರಿ ಭವನ’, ‘ತೆಂಕನಿಡಿಯೂರಿನ ಕುಳುವಾರಿಗಳು’ (ಕಾದಂಬರಿಗಳು), ‘ಆಗಾಗ ಅನಿಸಿದ್ದು’ ಎಂಬ ಅಂಕಣಗಳ ಸಂಗ್ರಹವಲ್ಲದೆ ನಾಟಕಗಳನ್ನೂ (ಅವುಗಳಲ್ಲಿ ‘ನಲವತ್ತರ ನಲುಗು’ ಪ್ರಕಟಗೊಂಡಿದೆ), ಸಂಕ್ಷಿಪ್ತ ಆತ್ಮಕಥನವನ್ನೂ (‘ಎಳೆದ ತೇರು’) ಬರೆದಿದ್ದಾರೆ. ಬರವಣಿಗೆಯ ಜೊತೆಜೊತೆಯಲ್ಲಿಯೇ ಅವರು ವಿಜ್ಞಾನ ಹಾಗೂ ಸಾಂಸ್ಥಿಕ,

